ಬದಲಿಸಿದಳು. ಹುಡುಗನೊಬ್ಬ ಹಾಸಿಗೆ, ತಲೆ ದಿಂಬು ಹಿಡಿದುಕೊಂಡು ಬರತೊಡಗಿದ್ದ. ಆ ಕಡೆ ನೋಡಿದಳು. ಆ ಹುಡುಗ ಅಲ್ಲೇ ಗುಡಿಯಲ್ಲಿ ಹಾಸಿಗೆ ಹಾಸಿ ಅಡ್ಡಾದ. ಅವನು ಮಲಗಿಕೊಂಡೆ, 'ಏನ್ವೆ ಊಟ ಮಾಡಿದಿಲ್ಲ...' ಅಂದ. ಪದ್ಮಾ ಅವನನ್ನು ನೋಡಿದಳೇ ವಿನಃ ಮಾತಾಡಲಿಲ್ಲ. 'ಹುಚ್ಚರ ಜೊತಿ ಏನು ಮಾತಾಡೋದು...' ಅಂದುಕೊಂಡು ಅಂವ ಮಲಗಿದ.

ಊರ ತುಂಬಾ ರಾತ್ರಿಯ ನೀರವತೆ ಆವರಿಸಿತ್ತು. ಸಣ್ಣಗೆ ಗಾಳಿ ಸುಳಿಯತೊಡಗಿತ್ತು. ಊರಂತ ಊರೇ ನಿದ್ದೆಗೆ ಜಾರಿತ್ತು. ಅಲ್ಲೊಂದು ಇಲ್ಲೊಂದು ನಾಯಿ ಬೊಗಳುತ್ತಿದ್ದವು. ಎಲ್ಲೋ ದೂರದಲ್ಲಿ ಮಗುವಿನ ಅಳು ಕೇಳತೊಡಗಿತ್ತು. ಪದ್ಮಾ, ಆ ಮಗುವಿನ ಅಳು ಯಾವ ಕಡೆಯಿಂದ ಬರುತ್ತಿದೆ ಎಂದು ಆಲಿಸಲು ಕಿವಿಗೊಟ್ಟಳು. ಮಗು ಅಳು ನಿಲ್ಲಿಸಿತು. ಗೊಂದಲಗೊಂಡಳು. ಅದು ತನ್ನದೆ ಮಗುವೆಂಬಂತೆ ಚಡಪಡಿಸತೊಡಗಿದಳು. ಅವಳಿಗೇ ಗೊತ್ತಾಗದಂತೆ ಕಣ್ರೆಪ್ಪೆ ತೊಯ್ದವು. ಗುಡಿಯಲ್ಲಿ ಮಲಗಿದ್ದ ಆ ಹುಡುಗನನ್ನು ಎಬ್ಬಿಸಿದಳು. ಅವನು ಎದ್ದು ಕಕ್ಕಾಬಿಕ್ಕಿಯಾದ. 'ನನ್ನ ಮಗು ಕೊಡು ಎಲ್ಲಿಟ್ಟಿ. ಈಗ ಅಳಾಕುಂತಿತ್ತು. ಏನೂ ಗೊತ್ತಿಲ್ಲದ ಮಳ್ಳನಂಗ ಮಲಗಿಯಲ' ಎಂದಳು.

ಆ ಹುಡುಗ ಅಚ್ಚರಿಯ ಹಳ್ಳದಲ್ಲಿ ಬಿದ್ದ. ಏನು ಮಾಡಬೇಕೋ ತಿಳಿಯಲಿಲ್ಲ ಅವನಿಗೆ. ಮಾತು ತುಟಿಯ ದಾಟದೆ ಅವಳನ್ನೇ ದಿಟ್ಟಿಸಿದ. ಎಡಗಡೆ ಹರಿದ ಜಂಪರಿನಿಂದ ಹೌದೋ ಅಲ್ಲವೋ ಎನ್ನುವಷ್ಟು ಅವಳ ಮೊಲೆಯ ಸ್ವಲ್ಪ ಭಾಗ ತೋರತೊಡಗಿತ್ತು. ಅವನೊಳಗೆ ಹರೆಯ ಮಿಸುಗೊಡೆಯಿತು. 'ಬಾ ನನ್ನ ಜೊತೆ. ಇಲ್ಲೇ ಇರ್ಬಹುದು ನಿನ್ನ ಮಗು...' ಎಂದ. ಪದ್ಮಾ ಖುಷಿಗೊಂಡು ಬೆಳ್ದಿಂಗಳಂತೆ ನಕ್ಕಳು. ಆ ಹುಡುಗನಿಗೆ ಅವಳು ಮೋಹಕವಾಗಿ ಕಂಡಳು. ಗುಡಿಯ ಹಿಂದೆ ಕರೆದುಕೊಂಡು ಹೋದ. ಅಲ್ಲಿ ಕತ್ತಲು ಹಾಸಿ ಹೊದ್ದು ಮಲಗಿತ್ತು. 'ನಾ ಹೇಳಿದಂಗ ಕೇಳು. ಅಂದ್ರ ನಿನ್ನ ಮಗುನ್ನ ಕೊಡ್ತಿನಿ...' ಅಂದ. ಅವಳು 'ಹ್ಞೂಂ' ಎಂದಳು.

ಆ ಹುಡುಗ ಆ ಕಡೆ ಈ ಕಡೆ ನೋಡಿದ. ನರಪಿಳ್ಳೆಯ ಸುಳಿವೂ ಕಾಣಲಿಲ್ಲ. ಉದ್ರೇಕಗೊಂಡಿದ್ದ. ಅವಳನ್ನು ತಬ್ಬಿ ಮುತ್ತಿಟ್ಟ. ಅವಳು ಪ್ರತಿರೋಧಿಸಲಿಲ್ಲ. ಮಾತು ಕೊಟ್ಟಂತೆ ನಡೆದುಕೊಂಡಳು. ಸುಖದ ನರಳಿಕೆ ಇಬ್ಬರನ್ನೂ ಮುತ್ತಿತು. ಇಬ್ಬರ ಹಣೆಯ ಮೇಲೂ ಬೆವರ ಹನಿಗಳು ಸಾಲುಗಟ್ಟಿದವು. ಅವನು ಆನಂದದ ತುತ್ತ ತುದಿಯಲ್ಲಿ ತೇಲತೊಡಗಿದ. ಎಲ್ಲ ಮುಗಿದ ಮೇಲೆ ಮತ್ತೆ ಗುಡಿಗೆ ಕರೆದುಕೊಂಡು ಬಂದ. 'ಮಗು ಎಲ್ಲೋ ಹೋಗಿದೆ. ನಾಳೆ ಹುಡುಕಿ ಕೊಡ್ತೀನಿ...' ಅಂದ. ಇವನ ಮೇಲೆ ಭರವಸೆ ಇಟ್ಟವಳಂತೆ ಹ್ಞೂಂಗುಟ್ಟಿದಳು. ಇಬ್ಬರೂ ನಿದ್ದೆಗೆ ಜಾರಿದರು.

ಮತ್ತೆ ಮಾರನೆಯ ರಾತ್ರಿ. ಅದೇ ಗುಡಿಯ ಹಿಂದಿನ ಕತ್ತಲು. ಆ ಹುಡುಗ ಹೇಳುವ ಮೊದಲೇ ಪದ್ಮಾ ತಾನೇ ಸೀರೆ ಎತ್ತಿದಳು. ಸುಳಿಗಾಳಿಯಲ್ಲೂ ಮೈ ಬೆವರಿತು. ಮತ್ತೆ ಗುಡಿಗೆ ಬಂದು ನಿದ್ದೆ ಹೋದರು. ದಿನಗಳು ಉರುಳಿದವು. ಮೂರ್ನಾಲ್ಕು ತಿಂಗಳಾಗಿರಬೇಕು. ಪದ್ಮಾ ಸ್ವಲ್ಪ ದಪ್ಪವಾದಂತೆ ಗೋಚರಿಸತೊಡಗಿದಳು. ಹುಡುಗನ ಎದೆಯೊಳಗೆ ಹೆದರಿಕೆಯ ಸುಂಟರಗಾಳಿ ಎದ್ದಿತು. ಇದು ತನ್ನ ತಲೆಗೆ ಬರುವಂತಿದೆ ಎಂದುಕೊಂಡ. ಹೇಗಾದರೂ ಮಾಡಿ ಇವಳಿಂದ ದೂರವಾಗಬೇಕೆಂದುಕೊಂಡ. ಆ ರಾತ್ರಿ ಹುಡುಗ ಪದ್ಮಾಳ ಹೊಟ್ಟೆ ಮುಟ್ಟುತ್ತಾ 'ನಿನ್ನ ಮಗು ಹೊಟ್ಟೇಲಿ ಇದೆ. ಒಂದಿಷ್ಟು ದಿನ ಕಳೆದ ಮ್ಯಾಲೆ ಹೊರಗ ಬರುತ್ತ. ಹೊಟ್ಟೆ ಜೋಪಾನ ನೋಡ್ಕೊ. ನಾನು ಊರಿಗೆ ಹೋಗ್ತಿನಿ. ನಾಳಿಂದ ಈ ಕಡೆ ಬರಲ್ಲಾ...' ಎಂದು ಹೇಳಿದ.